ದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಂತ್ರಿಮಂಡಲ ನಾನು ಪ್ರಧಾನಿಯವರಲ್ಲಿ ರಿಕ್ವೆಸ್ಟ್ ಮಾಡುತ್ತೇನೆ. ಆಂಧ್ರ ಪ್ರದೇಶಕ್ಕೆ ಹೋಗುವ ದಿನ ಇಲ್ಲಿಗೂ ಅವರು ಬರಲಿ.

ಎರಡನೆಯದಾಗಿ ಆಂಧ್ರದವರು ಇದಕ್ಕೆ clearance ಕೊಡಲಿ or clearance ಕೊಡದೇ ಹೋದರೂ I am going to do the work ಎಂದು ಹೇಳುವುದಾದರೆ On behalf of the Government of Karnataka, I want to make one point very clear. ಅದೇನೆಂದರೆ ಅವರು ಸ್ಕೀಂ (ಬಿ) ಇನ್ನೂ ಪಬ್ಲಿಷ್ ಮಾಡಿಲ್ಲ. ಅವರು ಸ್ಕೀಂ (ಬಿ) ಪಬ್ಲಿಷ್ ಮಾಡಲಿ, ಮಾಡದೇ ಇರಲಿ ಅವರು ಕರ್ನಾಟಕದ ೪ ಕೋಟಿ ಜನತೆಗೆ ದ್ರೋಹ ಬಗೆಯುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. Even at the cost of whatever may be the othnr activities, we wanted to see that Scheme 'B" should also be taken up as a challenge to the Andhra people. We want to see that this entire water of Krisnna basin is properly used for the benifit of the people of the State.

ಅಧ್ಯಕ್ಷರು.—ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್, ನೀವು ಪ್ರಶ್ನೆಯನ್ನು ಕೇಳಿ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಮುಂದಿನ ಪ್ರಶ್ನೆ ತೆಗೆದುಕೊಳ್ಳುವುದಕ್ಕೆ ಮುನ್ನ ನನ್ನದೊಂದು ಪ್ರಶ್ನೆ ಇದೆ, ಪ್ರಾಮಿಸ್ ಕೊಡತಕ್ಕಂಥ ಪ್ರಶ್ನೆ ಇದೆ.

ಅಧ್ಯಕ್ಷರು.—ನಾನು ಈಗಾಗಲೇ ಮುಂದಿನ ಪ್ರಶ್ನೆ ಕೇಳಲು ಕರೆದಿದ್ದೇನೆ. ಈಗ ಹಿಂದಿನದಕ್ಕೆ ಹೋಗುವ ಪ್ರಶ್ನೆಯೂ ಇಲ್ಲ, ಉತ್ತರವೂ ಇಲ್ಲ. ನಾನು ಮಾನ್ಯ ಬಂಗಾರಪ್ಪನವರಿಗೂ ಅವಕಾಶ ಕೊಟ್ಟಿಲ್ಲ. ಬೇರೆ ಯಾರಿಗೂ ಮತ್ತೆ ಕೇಳುವುದಕ್ಕೆ ಅವಕಾಶ ಕೊಟ್ಟಿಲ್ಲ. ಇನ್ನೂ ಬೇಕಾದಷ್ಟು ಪ್ರಶ್ನೆಗಳು ಇವೆ. ತಾವು ಕಂಠಿತುಕೊಳ್ಳಬೇಕು. ಶ್ರೀ ವಿ. ಗುತ್ತೇದಾರ್ ರವರೇ ತಾವು ಪ್ರಶ್ನೆ ಕೇಳಿ.

ಗುಲ್ಬರ್ಗಾ ಜಿಲ್ಲೆಯಲ್ಲಿ ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ಇರುವ ಬಗ್ಗೆ

೧೩೪. ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್ (ಅಫಜಲ್‌ಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಎಷ್ಟು ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ,

ಆ) ಎಷ್ಟು ಶಾಲೆಗಳಿಗಾಗಿ ಕಟ್ಟಡವನ್ನು ಸರ್ಕಾರದವರು ಪ್ರಸ್ತುತ ಕಟ್ಟಿಸುತ್ತಿದ್ದಾರೆ,

ಇ) ಈ ಕಟ್ಟಡಗಳನ್ನು ಯಾವಾಗ ಪೂರ್ತಿಗೊಳಿಸಲಾಗುವುದು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ೫೩ ಸರ್ಕಾರಿ ಪ್ರಾಥಮಿಕ/ಮಾಧ್ಯಮಿಕ ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ.

ಆ) ಒಂದು ಪ್ರಾಥಮಿಕ ಶಾಲೆ, ಒಂದು ಪ್ರೌಢಶಾಲೆ, ಒಂದು ಕಿರಿಯ ಮಹಾವಿದ್ಯಾಲಯ.

ಇ) ಮುಂದಿನ ಎರಡು-ಮೂರು ವರ್ಷಗಳಲ್ಲಿ ಪೂರ್ತಿಗೊಳಿಸಲಾಗುವುದು.

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಈ ಪ್ರಶ್ನೆಯಂ(ಅ)ಗೆ ಉತ್ತರವಾಗಿ ೫೩ ಸರ್ಕಾರಿ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ ಎಂದು ಹೇಳಿದರು. ಇದನ್ನು ಎಷ್ಟು ವರ್ಷದೊಳಗೆ ಮುಗಿಸುತ್ತೇವೆಂದು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಡಿ. ಮಂಜುನಾಥ್.—ಇಷ್ಟೇ ವರ್ಷದಲ್ಲಿ ಮುಗಿಸುತ್ತೇವೆಂದು ಹೇಳುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಕೆ.ಬಿ. ಶಾಣಪ್ಪ.—ಸರ್ಕಾರೀ ಸ್ಕೂಲುಗಳನ್ನು ನಡೆಸುವುದಕ್ಕೆ ಅನೇಕ ಭಾಗಗಳಲ್ಲಿ ಖಾಸಗೀ ಕಟ್ಟಡಗಳನ್ನು ಬಾಡಿಗೆಗೆ ತೆಗೆದುಕೊಂಡಿದ್ದಾರೆ, ಇವರು ಎಲ್ಲಾ ಭಾಗದಲ್ಲೂ ಕಟ್ಟಡವನ್ನು ಕಟ್ಟಬೇಕಾದರೆ ನಿಧಾನವಾಗುತ್ತದೆ. ಈಗ ಇದರಲ್ಲಿ ಒಂದು ಪ್ರಾಬ್ಲಮ್ ಇದೆ. ಹಿಂದೆ ಶಿಕ್ಷಣ ರಾಜ್ಯ ಮಂತ್ರಿ

ಯಾಗಿದ್ದ ಶ್ರೀ ಹೆಚ್.ಜಿ. ಗೋವಿಂದೇಗೌಡರು ಇರುವಾಗ ಗುಲ್ಬರ್ಗಾದಲ್ಲಿರುವ ಆಫೀಸ್ ಗರ್ಲ್ಸ್ ಸ್ಕೂಲ್ ವಿನಂ ಇತ್ತು. ಅದರ ಓನರ್ ಕೋರ್ಟಿಗೆ ಹೋಗಿ ಅದನ್ನು ಖಾಲಿ ಮಾಡಿಸಿದ. ಆ ಸ್ಕೂಲಿನಲ್ಲಿದ್ದ ಹುಡುಗರನ್ನೆಲ್ಲಾ ಹೊರಗೆ ಹಾಕಿದರು ಆಗ ಸುಮಾರು ೨೦೦ ಹುಡುಗರು ಹೊರಗಡೆ ಕೂಡಬೇಕಾಯಿತು ಇಂತಹ ಒಂದು ಸಮಸ್ಯೆ ಇದೆ. ಪ್ರೈವೇಟ್‌ನವರು ಇಚ್ಛಿಗೆ ಬಾಡಿಗೆ ಬರುತ್ತದೆ ಎಂದು ಏನಾದರೂ ಈ ರೀತಿ ಕಾನೂನ್ರಮಾಡಿ ವಿಕೇಟ್ ಮಾಡಲಿಕ್ಕೆ ಪ್ರಯತ್ನ ನಡೆಸಿದ್ದಾರೆ, ಆದ್ದರಿಂದ ಇದನ್ನು ಅವಾಯ್ಡ್ ಮಾಡಲಿಕ್ಕೆ ಸರ್ಕಾರ ೫೩ ಕಟ್ಟಡಗಳನ್ನು ೧೯೮೬-೮೭ರೊಳಗೆ ಮುಗಿಸುತ್ತದೆ ಎಂದು ಮಂತ್ರಿಗಳು ಭರವಸೆ ಕೊಡಬಹುದೇ ?

ಶ್ರೀ ಡಿ. ಮಂಜುನಾಥ್.—ಇಷ್ಟೇ ದಿವಸಗಳಲ್ಲಿ ಮುಗಿಸುತ್ತೇವೆ ಎಂದು ಭರವಸೆ ಕೊಡುವುದಕ್ಕೆ ಕಷ್ಟವಿದೆ ಏಕೆಂದರೆ ನಮಗೆ ಹಣದ ಕೊರತೆ ಇದೆ. ಇದರ ಜೊತೆಗೆ ಚಿತ್ತಾಪುರ ತಾಲ್ಲೂಕಿನಲ್ಲಿ ೩ ಕಟ್ಟಡಗಳನ್ನು ಶುರು ಮಾಡಿದ್ದೇವೆ. ಇದಕ್ಕೆ ಪ್ಲಾನ್ ಎಸ್ಟಿಮೇಟ್ ಮಾಡಿ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್‌ಗೆ ಕಳುಹಿಸಿ ಎಂದು ಹೇಳಿದ್ದೇವೆ. ಈ ಮೂರು ಕಟ್ಟಡಗಳನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಮಾಲಿಕಯ್ಯ ವಿ ಗುತ್ತೇದಾರ.—೫೩ ಕಟ್ಟಡಗಳಲ್ಲಿ ೩ ಕಟ್ಟಡಗಳನ್ನು ಮಾತ್ರ ತೆಗೆದು ಕೊಂಡಿದ್ದಾರೆ. ಉಳಿದ ೫೦ ಕಟ್ಟಡಗಳನ್ನು ಮಾಡುವುದಾದರೆ ಎಷ್ಟು ಸಮಯವಾಗುತ್ತದೆ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ಸವಿಸ್ತಾರವಾಗಿ ಹೇಳಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಆಲ್ಲಿಗೆ ಬಂದಾಗ ಗುಲ್ಬರ್ಗ ಜಿಲ್ಲೆಯ ಶಾಲೆಗಳ ಪರಿಸ್ಥಿತಿಯನ್ನು ಈಗಾಗಲೇ ಹೇಳಿದ್ದೇವೆ. ಅದರ ಬಗ್ಗೆ ಹೆಚ್ಚಿನ ಗಮನ ಕೊಡುವುದಾಗಿ ಭರವಸೆ ಕೊಟ್ಟಿದ್ದಾರೆ. ಅಲ್ಲಿ ಶಾಲಾ ಕಟ್ಟಡಗಳು ರಿಪೇರಿ ಇಲ್ಲದೆ ಬೀಳುವ ಪರಿಸ್ಥಿತಿ ಬಂದಿದೆ. ಈ ಸಂದರ್ಭ ಇರುವಾಗ ೫೩ ಕಟ್ಟಡಗಳನ್ನು ತೆಗೆದುಕೊಳ್ಳುವುದಕ್ಕೆ ಬಹಳಷ್ಟು ಸಮಯ ಆಗುವುದಾದರೆ ಅಷ್ಟರಲ್ಲಿ ಇದ್ದ ಬಿಲ್ಡಿಂಗ್ ಎಲ್ಲಾ ಬಿದ್ದುಬಿಟ್ಟು ಶಾಲೆಗಳನ್ನು ಮುಚ್ಚುವ ಪರಿಸ್ಥಿತಿ ಬರ ಬಹುದು. ಆದುದರಿಂದ ಹೆಚ್ಚಿನ ರೀತಿಯಲ್ಲಿ ತಾವು ಆ ಭಾಗಕ್ಕೆ ಗಮನಕೊಟ್ಟು ಈ ವರ್ಷದ ಅವಧಿಯಲ್ಲಿ ಎಷ್ಟು ಶಾಲೆಗಳನ್ನು ಮಾಡುತ್ತೀರಿ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಡಿ. ಮಂಜುನಾಥ್.—ರಿಪೇರಿ ಮಾಡುವುದಕ್ಕೆ ಹೇಳುತ್ತೇನೆ. ಮಾನ್ಯ ಗ್ರಾಮಾಭಿವೃದ್ಧಿ ಸಚಿವರಿಗೆ ಒಂದು ಮಾತನ್ನು ಹೇಳಿದ್ದೇನೆ. ಮುಂದೆ ಜಿಲ್ಲಾ ಪರಿಷತ್, ಮಂಡಲ್ ಪಂಚಾಯತ್ ಚುನಾವಣೆಗಳು ಬರುತ್ತವೆ, ಪೋಲಿಂಗ್ ಬೂತ್ ಆಗಿ ಆ ಕಟ್ಟಡಗಳನ್ನು ತೆಗೆದುಕೊಳ್ಳುತ್ತೀರಿ ರಿಪೇರಿ ಮಾಡಿಸಿ ಎಂದು ಕೇಳಿಕೊಂಡಿದ್ದೇನೆ. ಎಲ್ಲಾ ಕಟ್ಟಡಗಳನ್ನು ಕಟ್ಟುವುದಕ್ಕೆ ಸಧ್ಯಕ್ಕೆ ಕಷ್ಟವಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಶಾಲಾ ಕಟ್ಟಡಗಳ ರಿಪೇರಿ ಕೆಲಸ ಆಗುವುದು ಎಲೆಕ್ಷನ್ ಬಂದಾಗ ಮಾತ್ರ.

ಶ್ರೀ ಡಿ. ಮಂಜುನಾಥ್.—ಎಲ್ಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ತೊಂದರೆ ಇದೆ. ಮಾನ್ಯ ಸದಸ್ಯರಲ್ಲಿ ತಮ್ಮ ಮೂಲಕ ಆರಿಕೆ ಮಾಡಿಕೊಳ್ಳುತ್ತೇನೆ. ಸಾಧ್ಯವಾದಷ್ಟು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಎನ್.ಆರ್.ಇ.ಪಿ., ಆರ್.ಎಲ್.ಇ.ಜಿ.ಪಿ. ಮುಂತಾದ ಬೇರೆ ಬೇರೆ ಸ್ಕೀಂಗಳಲ್ಲಿ ತಾವು ಏನಾದರೂ ದುರಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಮಾಡಿದರೆ ಸಾಧ್ಯವಾಗುತ್ತದೆ ಕೆಲವು ಕಡೆ ಆಗಿದೆ. ಆದುದರಿಂದ ನೀವೂ ಪ್ರಯತ್ನ ಮಾಡಬೇಕು.

ಶ್ರೀ ಕೆ.ಬಿ. ಶಾಣಪ್ಪ.—ಈ ೫೩ ಕಟ್ಟಡಗಳನ್ನು ಕಟ್ಟಿಸುವುದರಲ್ಲಿ ಉಳಿದ ೫೩ ಕಟ್ಟಡಗಳು ಬಿದ್ದು ಹೋಗುತ್ತದೆ.

ಶ್ರೀ ಎಸ್.ಕೆ ಕಾಂತ.—ಮಾನ್ಯ ಮಂತ್ರಿಗಳು ಎನ್.ಆರ್.ಇ.ಪಿ., ಆರ್.ಎಲ್.ಇ.ಜಿ.ಪಿ., ಮುಂತಾದ ಬೇರೆ ಬೇರೆ ಸ್ಕೀಂಗಳಲ್ಲಿ ದುರಸ್ತಿ ಕ್ರಮ ತೆಗೆದುಕೊಳ್ಳಬೇಕು ಎನ್ನುವ ತಕ್ಕ ವಿಚಾರ ಹೇಳಿದರು. ನಮ್ಮ ಗುಲ್ಬರ್ಗ ನಗರದಲ್ಲಿ ೧೦೦ಕ್ಕೆ ೯೦ರಷ್ಟು ಶಾಲೆಗಳು ಸಣ್ಣಸಣ್ಣ ಬಾಡಿಗೆ ಮನೆಗಳಲ್ಲಿ ನಡೆಯುತ್ತಿವೆ ಮೊನ್ನೆ ತಾನೆ ಒಬ್ಬರು ಬಾಡಿಗೆ ನಿಯಂತ್ರಣದ ಮೂಲಕ ಖಾಲಿ ಮಾಡಿಸಿರುವುದರಿಂದ ಹುಡುಗರು ಬೀದಿಯಲ್ಲಿದ್ದಾರೆ. ಸರ್ಕಾರಿ ಬಿಲ್ಡಿಂಗ್ ಇಲ್ಲವೇ ಇಲ್ಲ. ಇಂತಹ ಪರಿಸ್ಥಿತಿ ಇರುವಾಗ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಅಮೇಲೆ ಎನ್.ಆರ್.ಇ.ಪಿ.

ಸ್ಕೀಂ ನಮ್ಮ ನಗರ ಪ್ರದೇಶದಲ್ಲಿ ಬರುವುದಿಲ್ಲ. ಆದ್ದರಿಂದ ಈ ಸ್ಕೀಮುಗಳ ಕೆಳಗೆ ದುರಸ್ತಿ ಮಾಡುವ ಪರಿಸ್ಥಿತಿ ಇಲ್ಲ. ಇಂತಹ ತೊಂದರೆಗಳ ಬಗ್ಗೆ ತಾವು ಏನು ವಿಚಾರ ಮಾಡುತ್ತೀರಿ ?

ಶ್ರೀ ಡಿ. ಮಂಜುನಾಥ್.—ನಗರ ಪ್ರದೇಶಗಳಲ್ಲಿ ಎನ್.ಆರ್.ಇ.ಪಿ.ಯಲ್ಲಿ ಮಾಡುವುದಕ್ಕಾಗುವುದಿಲ್ಲ. ನಾನು ಹೇಳಿದ್ದಾದು ಗ್ರಾಮಾಂತರ ಪ್ರದೇಶಗಳಲ್ಲಿ ಮಾಡಬೇಕು ಎಂದು ಮಂತ್ರಿ ಬಾಡಿಗೆ ನಿಯಂತ್ರಣದ ಮೂಲಕ ಖಾಲಿ ಮಾಡಿಸಿ ಹುಡುಗರನ್ನು ಹೊರಗೆ ಹಾಕಿದ್ದಾರೆಂದು ಹೇಳಿದ್ದಾರೆ. ಅದು ನನ್ನ ಗಮನಕ್ಕೆ ಬಂದಿಲ್ಲ. ಬೇರೆ ಕಟ್ಟಡವನ್ನು ಬಾಡಿಗೆಗೆ ತೆಗೆದುಕೊಂಡು ನಡೆಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಜೊತೆಗೆ ಹಣದ ಕೊರತೆ ಇದೆ. ಕಳೆದ ವರ್ಷಕ್ಕಿಂತ ಈ ವರ್ಷ ಜಾಸ್ತಿ ಹಣವನ್ನು ಈ ಕೆಲಸಕ್ಕೆ ಇಟ್ಟು ಕೊಂಡಿದ್ದೇವೆ. ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಬೆಂಗಳೂರು ಮತ್ತು ಮೈಸೂರು ನಡುವೆ ಎಕ್ಸ್‌ಪ್ರೆಸ್ ವೇಗದ ಸಂಚಾರಕ್ಕೆ ಹೆದ್ದಾರಿಯನ್ನು ನಿರ್ಮಿಸುವುದು.

೧೨೨ ಶ್ರೀ ಜಿ. ರಾಜುಗೌಡ (ಹನೂರ್).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶ ಅಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು, ಬೆಂಗಳೂರು ನಡುವೆ ಎಕ್ಸ್‌ಪ್ರೆಸ್ ವೇಗದ ಸಂಚಾರಕ್ಕೆ ವಿಸಲಾದ ಹೆದ್ದಾರಿ ನಿರ್ಮಿಸುವ ಬಗ್ಗೆ ರಾಜ್ಯ ಸರ್ಕಾರದ ನಿಲುವು ಏನು;

ಆ) ಏನೇ ಯೋಜನೆಯಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಬಾಬಿನಲ್ಲಿ ರಾಜ್ಯಕ್ಕೆ ದೊರೆಯಬಹುದಾದ ಪಾಲು ಎಷ್ಟು.

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಸಚಿವರು).—

ಅ) ಬೆಂಗಳೂರು–ಮೈಸೂರು ರಸ್ತೆಯನ್ನು ನಾಲ್ಕು ವಾಹನ ಪಥಗಳುಳ್ಳ ಎಕ್ಸ್‌ಪ್ರೆಸ್ ಹೈವೇ ಮಾಡುವ ವಿಚಾರ ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ರಾಷ್ಟ್ರೀಯ ಹೆದ್ದಾರಿಗಳ ಬಾಬಿನಲ್ಲಿ ವಿನಿಯೋಗವನ್ನು ಕೇಂದ್ರ ಸರ್ಕಾರವು ಪ್ರತಿ ವರ್ಷವೂ ಆಯಾ ವರ್ಷಗಳಲ್ಲಿ ತೀರ್ಮಾನಿಸುವುದರಿಂದ ಒಟ್ಟು ಏನೇ ಯೋಜನೆಯಲ್ಲಿ ಎಷ್ಟು ಅನುದಾನವನ್ನು ಒದಗಿಸಲಾಗುತ್ತದೆ ಎಂಬುದು ಗೊತ್ತಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ —ಮಾನ್ಯ ಸದಸ್ಯರು ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡಕೂಡದು ಎಂದು ನಾನೇ ವಿವರವಾಗಿ ಹೇಳುತ್ತೇನೆ. ಬೆಂಗಳೂರು–ಮೈಸೂರು ರಸ್ತೆಯನ್ನು ಎಕ್ಸ್‌ಪ್ರೆಸ್ ಹೈವೇ ಮಾಡುವುದರ ಸಲುವಾಗಿ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಲಿಕ್ಕೆ ಟೆಂಡರ್ ಕರೆದಿದ್ದೇವೆ, ೧೮ ಟೆಂಡರ್ ಬಂದಿದೆ. ಅದು ಈಗಾಗಲೇ ಸರ್ಕಾರದ ಪರಿಶೀಲನಾ ಹಂತದಲ್ಲಿದೆ. ಇದಕ್ಕೆ ಸುಮಾರು ೧೮೦ ಕೋಟಿ ರೂಪಾಯಿಗಳು ಆಗಬಹುದು ಎನ್ನುವ ಅಭಿಪ್ರಾಯ ಇದೆ. ವರ್ಲ್ಡ್ ಬ್ಯಾಂಕ್, ಪಬ್ಲಿಕ್ ಟ್ರಾನ್ಸ್ ಪೋರ್ಟ್ ಆಪರೇಟರ್ಸ್, ಮತ್ತು ಮೇಕಿಂಗ್ ಯೂರೋ ಆಫ್ ದಿ ಬ್ಯಾಂಕ್ ಫೈನಾನ್ಸಿಸ್ ಈ ಮೂರರ ದಿಕ್ಕಿನಲ್ಲಿ ನಾವು ಪ್ರಿಲಿಮಿನರಿಯಾಗಿ ಕೆಲಸ ನಡೆಸಿದ್ದೇವೆ. ಇನ್ನು ನ್ಯಾಷನಲ್ ಹೈವೇಗೆ ದುಡ್ಡು ಎಷ್ಟು ಬರುತ್ತದೆ ಎಂದು ಕೇಳಿದ್ದಾರೆ. ಏನೇ ಪಂಚವಾರ್ಷಿಕ ಯೋಜನೆಯಲ್ಲಿ ಇಷ್ಟು ದುಡ್ಡು ಕೊಡುತ್ತೇವೆ ಎಂದು ಕೇಂದ್ರದವರು ಇಂಡಿಕೇಟ್ ಮಾಡಿಲ್ಲ ೧೫೦ ಕೋಟಿ ರೂಪಾಯಿಗಳ ಅಂದಾಜುಗಳನ್ನು ಮಂಜೂರು ಮಾಡುತ್ತೇವೆಂದು ಹೇಳಿದ್ದಾರೆ. ಏನೇ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ಬಂದಿರತಕ್ಕಂಥಾದ್ದು ೪೬ ಕೋಟಿ ರೂಪಾಯಿಗಳು. ಈಗ ನಮಗೆ ಹಣ ಬರತಕ್ಕಂಥ ಧಾಟಿ ನೋಡಿದರೆ ೬೦–೬೫ ಕೋಟಿ ರೂಪಾಯಿಗಳು ಹಣ ಬರಬಹುದು ಎಂದು ನಿರೀಕ್ಷಣೆ ಮಾಡಿದ್ದೇವೆ. ಇನ್ನೂ ಹೆಚ್ಚು ಕೊಡಬೇಕು ಎಂದು ಕೇಂದ್ರಕ್ಕೆ ಒತ್ತಾಯ ಮಾಡಿದ್ದೇವೆ. ೭೦ ಕೋಟಿವರೆಗೆ ಬರಬಹುದು ಎಂಬ ಭಾವನೆ ಹೊಂದಿದ್ದೇವೆ.

ಶ್ರೀ ಜಿ. ರಾಜೂಗೌಡ.—ಬೆಂಗಳೂರು–ಮೈಸೂರು ರಸ್ತೆಯಲ್ಲಿ ವಾಹನಗಳ ದಟ್ಟಣೆ ಜಾಸ್ತಿಯಾಗಿರುವುದರಿಂದ ಆಗಾಗ್ಗೆ ಅಪಘಾತಗಳು ನಡೆಯುತ್ತವೆ, ಈಗ ಟೆಂಡರನ್ನು ಕರೆದಿದ್ದೇವೆ ಎಂದು